# ಕ್ಯಾನ್ಸರ್ ಗುಣಕಾರಕ; ಅತ್ಯಾಧುನಿಕ ಸೌಲಭ್ಯಗಳೂ ಇವೆ



ಡಾ. ಸಿ. ರಾಮಚಂದ್ರ
ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆ, ಬೆಂಗಳೂರು

- **ಕ್ಯಾನ್ಸರ್ ಚಿಕಿತ್ಸೆಗೆ ಅತ್ಯಾಧುನಿಕ ವೈದ್ಯಕೀಯ ವ್ಯವಸ್ಥೆ ಇದೆ ಎಂದಿರಿ. ಅವು ಯಾವುವು?**

ಕ್ಯಾನ್ಸರ್ ಗುಣಕಾರಕ. ಸದ್ಯ ಕ್ಯಾನ್ಸರ್ ಚಿಕಿತ್ಸೆಗೆ ಅಂತರರಾಷ್ಟ್ರೀಯ ಗುಣಮಟ್ಟದ ವೈದ್ಯಕೀಯ ಉಪಕರಣಗಳು ಬಂದಿದ್ದು, ರೋಗ ಪತ್ತೆ, ಚಿಕಿತ್ಸೆ ಸುಲಭದಲ್ಲಿ ಹಾಗೂ ಅತಿ ಶೀಘ್ರದಲ್ಲಿ ಮಾಡಬಹುದು. ಚಿಕಿತ್ಸೆಗೆ ಬಳಸುವ ರೇಡಿಯೇಷನ್, ಸಿಟಿಸಿ ಹಾಗೂ ರೊಬಾಟಿಕ್ ತಂತ್ರಜ್ಞಾನದಿಂದ ರೋಗಿ ಬಹುಬೇಗ ಗುಣಮುಖನಾಗಲು ಸಾಧ್ಯವಿದೆ. ರೊಬಾಟಿಕ್ ಸರ್ಜರಿ ಮೂಲಕ ಕ್ಯಾನ್ಸರ್ ಕಣಗಳನ್ನು ತೆಗೆದುಹಾಕಲು ಸಾಧ್ಯ. ‘ಕಿದ್ವಾಯಿ ಆಸ್ಪತ್ರೆ’ ಸರ್ಕಾರಿ ಸ್ವಾಮ್ಯದ ರಾಜ್ಯದ ಅತ್ಯಂತ ದೊಡ್ಡ ಕ್ಯಾನ್ಸರ್ ಕೇರ್ ಆಸ್ಪತ್ರೆಯಾಗಿದ್ದು, ರೊಬಾಟಿಕ್ ಸರ್ಜರಿಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಅಲ್ಲದೆ ರೊಬಾಟಿಕ್ ಸರ್ಜರಿ ಎಂಬುದು ಕೀಹೋಲ್ ಸರ್ಜರಿ. ಕಡಿಮೆ ಅವಧಿಯಲ್ಲಿ ರೊಬಾಟ್ ಮೂಲಕ ಇದನ್ನು ಮಾಡಬಹುದಾದ್ದರಿಂದ ಸಣ್ಣ ಗಾಯ, ಕಡಿಮೆ ರಕ್ತಸ್ರಾವ, ನೋವು ಕಡಿಮೆ, ಜೊತೆಗೆ ಕೆಲವೇ ದಿನಗಳ ಆಸ್ಪತ್ರೆ ವಾಸದಿಂದ ರೋಗಿ ಬೇಗ ಗುಣಮುಖನಾಗುತ್ತಾನೆ.

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಅತ್ಯಾಧುನಿಕ ಬೋನ್‌ಮಾರೋ ಟ್ರಾನ್ಸ್‌ಪ್ಲಾಂಟ್ (ಅಸ್ಥಿಮಜ್ಜೆ ಚಿಕಿತ್ಸೆ) ಬಂದಿದ್ದು, ಲಿಂಫೋಮಾ ಸೇರಿದಂತೆ ರಕ್ತ ಕ್ಯಾನ್ಸರ್‌ಗೆ ಹೇಳಿಮಾಡಿಸಿದಂತಹ ಅತ್ಯಾಧುನಿಕ, ಸುಲಭ ಚಿಕಿತ್ಸೆ ಇದು. ಇದಲ್ಲದೆ ಪೊಸಿಟ್ರಾನ್ ಎಮಿಷನ್ ಟೋಮೊಗ್ರಫಿ (PET) ಎಂಬ ಚಿಕಿತ್ಸೆ ಬಂದಿದ್ದು, ಇದರಲ್ಲಿ ರೋಗಿಯನ್ನು ಒಂದು ಯಂತ್ರದೊಳಗೆ ಕೂರಿಸಿ ದೇಹದ ಯಾವ ಭಾಗದಲ್ಲಿ, ಎಲ್ಲೆಲ್ಲಿ ಕ್ಯಾನ್ಸರ್ ಇದೆ ಎಂಬುದನ್ನು ಪತ್ತೆ ಹಚ್ಚಲು ಸಾಧ್ಯ. ಈ ರೋಗಿಗೆ ವಿವಿಧ ರೀತಿಯ ಪರೀಕ್ಷೆ ಮಾಡಿ ಯಾವ ಕ್ಯಾನ್ಸರ್‌ಗೆ ಹೇಗೆ ಚಿಕಿತ್ಸೆ ನೀಡಬೇಕು ಎಂಬುದನ್ನು ನಿಖರವಾಗಿ ನಿರ್ಧರಿಸಬಹುದು.

- **ಕ್ಯಾನ್ಸರ್ ಎಂದರೆ ಭಯಭೀತರಾಗುವ ಅಗತ್ಯವಿಲ್ಲ ಎಂದು ಗೊತ್ತಿದ್ದರೂ ರೋಗಿ ಮಾನಸಿಕವಾಗಿ ಕುಗ್ಗುವುದೇಕೆ?**

ಕ್ಯಾನ್ಸರ್ ಎಂದರೆ ಸಾಮಾನ್ಯವಾಗಿ ಯಾರ ಜೀವವಾದರೂ ಬಾಯಿಗೆ ಬರುತ್ತದೆ. ಹೆಚ್ಚಿನ ರೋಗಿಗಳಿಗೆ ಕ್ಯಾನ್ಸರ್‌ಗೆ ಕಾರಣ ಗೊತ್ತಿರುವುದಿಲ್ಲ. ಅರಿವಿನ ಕೊರತೆ ಇದಕ್ಕೆ ಕಾರಣ. ಬಹುತೇಕ ಬಡವರಿಗಂತೂ ತಪಾಸಣೆಗೆ ಬರುವವರೆಗೂ ಏನೂ ತಿಳಿದಿರುವುದಿಲ್ಲ. ಹೀಗಾಗಿ ಕ್ಯಾನ್ಸರ್ ಪತ್ತೆಯಾದ ಕೂಡಲೇ ಅದರ ಭಯಕ್ಕೇ ಮಾನಸಿಕವಾಗಿ ಬಹಳ ಕುಗ್ಗುತ್ತಾರೆ. ಭಯದ ಜೊತೆಗೆ ಸಾವು ಖಚಿತ ಎಂಬ ತೀರ್ಮಾನಕ್ಕೂ ಅವರೇ ಬರುತ್ತಾರೆ. ಮನೆಯವರನ್ನೂ ಹೆದರಿಸುತ್ತಾರೆ. ಮಾನಸಿಕ ಸ್ಥೈರ್ಯ ತುಂಬಿದ ಬಳಿಕವಷ್ಟೇ ಇಂಥವರಿಗೆ ಚಿಕಿತ್ಸೆ ನೀಡಬೇಕಾಗುತ್ತದೆ. ರೇಡಿಯೊಥೆರಪಿ, ಕಿಮೋಥೆರಪಿ, ಸರ್ಜರಿಗೆ ಸಂಬಂಧಿಸಿದ ಅಂದಾಜು 90 ಲಕ್ಷ ಕ್ಯಾನ್ಸರ್ ರೋಗಿಗಳು ಮೃತಪಡುತ್ತಾರೆ ಎನ್ನುತ್ತದೆ ಅಂಕಿಅಂಶ. 2030ರ ವೇಳೆಗೆ ಈ ಸಂಖ್ಯೆ ಇನ್ನೂ ಹೆಚ್ಚಾಗುವ ಅಪಾಯವಿದೆ ಎಂಬ ಎಚ್ಚರಿಕೆ ನೀಡುತ್ತದೆ ‘ವಿಶ್ವ ಆರೋಗ್ಯ ಸಂಸ್ಥೆ.’

### ಕ್ಯಾನ್ಸರ್‌ಗೆ ಕಾರಣಗಳೇನು?

- ಜೀವನಶೈಲಿ ಬದಲಾವಣೆ, ಜಂಕ್ ಆಹಾರ ಸೇವನೆ, ಒತ್ತಡದ ಬದುಕು, ಅಪಥ್ಯ.
- ಧೂಮಪಾನ, ಮದ್ಯಪಾನ, ತಂಬಾಕು ಉತ್ಪನ್ನಗಳ ಸೇವನೆ.
- ಅನುವಂಶೀಯ ಕಾರಣಗಳು.
- ಸ್ಟೀರಾಯ್ಡ್, ಆ್ಯಂಟಿಬಯಾಟಿಕ್‌ಗಳು, ಗರ್ಭನಿರೋಧಕ ಮಾತ್ರೆಗಳು, ಮಾದಕ ಉತ್ಪನ್ನಗಳ ಅತಿಬಳಕೆ.
- ಹೆಪಟೈಟಿಸ್ ಬಿ ಮತ್ತು ಸಿ ವೈರಸ್‌ನ ಸೋಂಕು, ಹ್ಯೂಮನ್ ಪಾಪಿಲೋಮ ವೈರಸ್ ಮುಂತಾದವು.

ಮಹಿಳೆ, ಮಕ್ಕಳು ಹಾಗೂ ಪುರುಷರಲ್ಲಿ ಅನೇಕ ರೀತಿಯ ಕ್ಯಾನ್ಸರ್‌ಗಳು ಕಂಡುಬರುತ್ತವಾದರೂ ಕೆಲವು ಪ್ರಮುಖ ಕ್ಯಾನ್ಸರ್‌ಗಳು ಯಾವ ವಯಸ್ಸಿನಲ್ಲಾದರೂ ಪತ್ತೆಯಾಗಬಹುದು. ಮುಖ್ಯವಾಗಿ ಮಹಿಳೆಯರಲ್ಲಿ ಸ್ತನಕ್ಯಾನ್ಸರ್, ಸ್ತನಚರ್ಮ ಕ್ಯಾನ್ಸರ್, ಸರ್ವೈಕಲ್ ಅಥವಾ ಗರ್ಭಕೊರಳಿನ ಕ್ಯಾನ್ಸರ್, ಮಕ್ಕಳಲ್ಲಿ ರಕ್ತಕ್ಯಾನ್ಸರ್, ಪುರುಷರಲ್ಲಿ ಲಿವರ್, ಪ್ರಾಸ್ಟೇಟ್, ಕೋಲನ್ ಕ್ಯಾನ್ಸರ್‌ಗಳು ಬರುವ ಸಾಧ್ಯತೆ ಹೆಚ್ಚು. ತಡಮಾಡದೆ ಪತ್ತೆ ಹಚ್ಚಿ ಚಿಕಿತ್ಸೆ ಪಡೆದರೆ ಸಂಪೂರ್ಣ ಗುಣಮುಖರಾಗಬಹುದು.

### ಅಪರೂಪದ ಸ್ತನಚರ್ಮ ಕ್ಯಾನ್ಸರ್

ಕಳೆದ ವರ್ಷ ನೈಜೀರಿಯಾದ ಅಮೀನಾ ಎಂಬ ಮಹಿಳೆ ಸ್ತನಚರ್ಮ ಕ್ಯಾನ್ಸರ್ ಚಿಕಿತ್ಸೆಗಾಗಿ ಬೆಂಗಳೂರಿಗೆ ಬಂದಿದ್ದರು. ಆಕೆಯನ್ನು ಪರೀಕ್ಷಿಸಿದ ಬೆಂಗಳೂರಿನ ಸೈಟೆಕೇರ್ ಆಸ್ಪತ್ರೆಯ ವೈದ್ಯರು, ಆಕೆಯ ಸ್ತನದಲ್ಲಿ ಐದು ಕೇಜಿ ಭಾರದ ಕ್ಯಾನ್ಸರ್‌ಕಾರಕ ಗಡ್ಡೆ ಇರುವುದನ್ನು ಪತ್ತೆ ಹಚ್ಚಿದರು. ಶಸ್ತ್ರಚಿಕಿತ್ಸೆ ಮೂಲಕ ಅದನ್ನು ಹೊರತೆಗೆಯಲಾಯಿತು.

‘ಅದು ಸ್ತನಚರ್ಮ ಕ್ಯಾನ್ಸರ್ ಪ್ರಕಾರದ್ದು. ಆ ಶಸ್ತ್ರಚಿಕಿತ್ಸೆ ಸಂಕೀರ್ಣವಾಗಿತ್ತು. ಅಲ್ಲದೆ ಆ ಪ್ರಕರಣ ಅತ್ಯಂತ ಸವಾಲಿನದ್ದಾಗಿತ್ತು’ ಎಂದು ಸೈಟೆಕೇರ್ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ ಡಾ. ಅಂತೋನಿ ಪೈಸ್ ಅವರು ಅಮೀನಾಳ

### ಮಕ್ಕಳಲ್ಲಿ ಕ್ಯಾನ್ಸರ್ ನೆರವಿಗೆ ಆನ್‌ಲೈನ್ ಸೇವೆ

ಮಕ್ಕಳಿಗೆ ಬರುವ ಕ್ಯಾನ್ಸರ್ ಚಿಕಿತ್ಸೆಗೆ ಹೆಚ್ಚಿನ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಚಿಕಿತ್ಸಾ ಘಟಕಗಳಿಲ್ಲ. ಈ ಕೊರತೆ ನೀಗಿಸಲು ಬೆಂಗಳೂರಿನಲ್ಲಿ onco.com ಎಂಬ ಆನ್‌ಲೈನ್ ಆರೋಗ್ಯ ಸೇವೆ ಅಸ್ತಿತ್ವಕ್ಕೆ ಬಂದಿದೆ. ಕ್ಯಾನ್ಸರ್ ಬಗ್ಗೆ ಸಂಶಯ ಬಂದಕೂಡಲೇ ಈ ಸಂಸ್ಥೆಯನ್ನು ಸಂಪರ್ಕಿಸಿದರೆ ಆರಂಭಿಕ ಚಿಕಿತ್ಸೆಯನ್ನು ಮಕ್ಕಳಿಗೆ ಉಚಿತವಾಗಿ ವ್ಯವಸ್ಥೆ ಮಾಡುತ್ತದೆ.